(ಆ) ಹಿಂದಿನ ಸರ್ಕಾರದವರು ಇದರಲ್ಲಿ ಪ್ರಯಾಣ ಮಾಡಲು ಸರ್ಕಾರ ಖರ್ಚು ಮಾಡಿದ ಹಣವೆಷ್ಟು ?

(ಇ) ಈಗಿನ ಸರ್ಕಾರದವರು ಹೆಲಿಕಾಪ್ಟರ್‌ನ ಪ್ರಯಾಣಕ್ಕಾಗಿ ಮಾಡಿರುವ ಖರ್ಚೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು)—

(ಅ) ರಾಜ್ಯ ಸರ್ಕಾರ ಹೆಲಿಕಾಪ್ಟರನ್ನು ದಿನಾಂಕ ೩೦ ಅಕ್ಟೋಬರ್ ೧೯೭೯ ರಂದು ಕೊಂಡಿದೆ. ಅದರ ಬೆಲೆ ೮೬,೩೨,೩೦೪-೦೦ ರೂ.ಗಳು.

(ಆ) ರೂ. ೯೫,೫೪,೮೯೬-೦೦

(ಇ) ರೂ, ೩೮,೮೪,೧೮೭-೦೦

ಮಂಗನ ಕಾಯಿಲೆ ಬಗ್ಗೆ

೫೪೬. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ)—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಈ ಹಿಂದೆ ಮಂಗನ ಕಾಯಿಲೆಯಿಂದ ಮೃತರಾದ ಆರು ಕುಟುಂಬದವರಿಗೆ ಪರಿಹಾರ ದೊರಕದಿರಲು ಕಾರಣವೇನು ?

(ಆ) ಅವರಿಗೆ ಯಾವಾಗ ಪರಿಹಾರದ ಹಣವನ್ನು ಕೊಡಲಾಗುವುದು.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿಗಳು)—

(ಅ) ಮಂಗನ ಕಾಯಿಲೆಯಿಂದ ಮೃತಪಟ್ಟಿರುವವರ ಪೂರ್ಣ ಮಾಹಿತಿಯು ದೊರಕದೇ ಇದ್ದುದರಿಂದ ವಿಳಂಬವಾಗಿದೆ.

(ಆ) ಪರಿಹಾರ ಕೊಡುವುದನ್ನು ಪರಿಶೀಲಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ತಡೆ ರಹಿತ ವಾಹನಗಳು ಕೋರಿಕೆಯ ನಿಲುಗಡೆ ಸ್ಥಳಗಳಲ್ಲಿ ನಿಲ್ಲಿಸದೇ ಇರುವುದರ ಬಗ್ಗೆ

೫೫೭. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ)—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಳ್ತಂಗಡಿ ತಾಲ್ಲೂಕು ಕೇಂದ್ರವಾಗಿದ್ದು ತಡೆರಹಿತ ಬಸ್ಸುಗಳು ಕೆಲವು ಸಂದರ್ಭಗಳಲ್ಲಿ ಕೇಳಿಕೆಯ ತಂಗುವಿಕೆ ನೆಲೆಯಲ್ಲಿ ನಿಲ್ಲದೇ ಬಸ್ ನಿಲ್ದಾಣದೊಳಗೆ ಬಾರದೆ ನೇರವಾಗಿ ಹೋಗುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಪ್ರಯಾಣಿಕರಿಗೆ ಇದರಿಂದಾಗುವ ತೊಂದರೆಯನ್ನು ಹೋಗಲಾಡಿಸಿ ಸೌಲಭ್ಯ ಕಲ್ಪಿಸಲಾಗುವುದೇ ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು)—

(ಅ) ಗಮನಕ್ಕೆ ಬಂದಿಲ್ಲ.

(ಆ) ಈಗ ಗಮನಕ್ಕೆ ಬಂದಿದ್ದು ಎಲ್ಲಿ ಯಾವ ವಾಹನಗಳು ನಿಲ್ಲಬೇಕೋ ಅಲ್ಲಿ ನಿಲ್ಲಿಸಲು ಕ್ರಮ ತೆಗೆದುಕೊಳ್ಳಲಾಗುವುದು.